ಚಿತ್ರಪಟ ಕಥನ




ಗೋಡೆ ಮೇಲಿನ ಅಕ್ಷರಗಳು ಅರ್ಥವಾಗದಿರಬಹುದು; ಆ ಹುಡುಗಿಯ ಮುಖಭಾವಕೆ ಅರ್ಥದ ಹಂಗಿದೆಯೇ?



ಕರಿನೀರ ಕನ್ನಡಿಯಲ್ಲಿ ಕಂಡಿದ್ದು ಬರಿಯ ಪ್ರತಿಬಿಂಬವೇ?

# ರಣರಂಗದಲ್ಲಿ 'ಪದವಿ' ಪ್ರದಾನ!



ಯುದ್ಧದಿಂದ ತತ್ತರಿಸಿ ಹೋಗಿರುವ ಉಕ್ರೇನ್, ಕಡಿಮೆ ವೆಚ್ಚದ ಶಿಕ್ಷಣಕ್ಕಾಗಿ ಬೇರೆ ಬೇರೆ ದೇಶಗಳ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದ ಪುಟ್ಟ ದೇಶ. ಉಕ್ರೇನ್ ಈಗ ರಷ್ಯಾದ ಜೊತೆಗಿನ ಯುದ್ಧದಲ್ಲಿ ರಣರಂಗವಾಗಿ ಬದಲಾಗಿದೆ. ಇಡೀ ಮೈಯನ್ನು ರಕ್ತಸಿಕ್ತ ಮಾಡಿಕೊಂಡಿರುವ ಆ ದೇಶವೀಗ ಭಗ್ನಾವಶೇಷಗಳನ್ನೇ ಹೊತ್ತುನಿಂತಿದೆ. ಈ ಕರಾಳದ ದಿನಗಳ ನೆನಪನ್ನು ವಿಶಿಷ್ಟವಾಗಿ ಅಷ್ಟೇ ಧ್ವನಿಪೂರ್ಣವಾಗಿ ದಾಖಲಿಸುವ ಪ್ರಯತ್ನವನ್ನು ಮಾಡಿದ್ದಾರೆ ಛಾಯಾಗ್ರಾಹಕ ಸ್ಟ್ಯಾನಿಸ್ಲಾವ್ ಸೆನ್ಯಾಕ್.

■ ಮಾಂಟೋ

ಸಭಾಂಗಣದ ಒಳಹೊರಗೆ ಕಿಕ್ಕಿರಿದಿರುವ ಯುವಸಮೂಹ. ಹರ್ಷೋದ್ಗಾರ, ಚಪ್ಪಾಳೆ. ಆ ಸದ್ದು ಸೀಳಿಕೊಂಡು ಬರುವ ಮೈಕ್ ಧ್ವನಿಯಲ್ಲಿ ಕೇಳಿಬರುವ ಹೆಸರು. ಹೆಮ್ಮೆಯಿಂದ ತಲೆಯೆತ್ತಿಕೊಂಡು ವೇದಿಕೆ ಹತ್ತಿ, ಗಣ್ಯಮಾನ್ಯರಿಂದ ಪದವಿ ಪ್ರಮಾಣಪತ್ರವನ್ನು ಪಡೆದು, ಕತ್ತಲ್ಲಿ ಚಿನ್ನದ ಪದಕವನ್ನು ತೂಗಿಸಿಕೊಂಡು ಫೋಟೊಗೆ ಪೋಸ್ ಕೊಡುವ ಆ ಗಳಿಗೆಯಲ್ಲಿ ಮಿಂಚುವ ಆ ಕಣ್ಣೊಳಗಿನ ಹೆಮ್ಮೆಯ ಭಾವಕ್ಕೆ ಸಮನಾದದ್ದು ಇನ್ನೇನಿದೆ? 'ಗ್ರ್ಯಾಜುಯೇಷನ್ ಡೇ' ಎನ್ನುವುದು ವಿದ್ಯಾರ್ಥಿಗಳ ಪಾಲಿನ ಹೆಮ್ಮೆಯ ದಿನ. ಆ ದಿನದ ಸಂಭ್ರಮ ಹೀಗೆಯೇ ಇರುವುದಲ್ಲವೇ?

ತಾಳಿ, ನಿಮ್ಮ ಕಾಲೇಜು ದಿನಗಳ ಗ್ರ್ಯಾಜುಯೇಷನ್ ಡೇ ನೆನಪುಗಳಲ್ಲಿ ಕಳೆದುಹೋಗದಿರಿ. ಆ ಸಂಭ್ರಮದ ನೆನಪಿನಲ್ಲಿ ನಿಮ್ಮನ್ನು ನೀವು ಅದ್ದಿಕೊಳ್ಳುವ ಪುಳಕವನ್ನು ನಾನು ಬಲ್ಲೆ. ಆದರೆ ಅದಕ್ಕೂ ಮುನ್ನ ಇಲ್ಲಿ ಇನ್ನೊಂದು ಚಿತ್ರಣವಿದೆ. ಸಾಧ್ಯವಾದರೆ ಅದನ್ನೂ ಮನಸಲ್ಲಿ ಕಲ್ಪಿಸಿಕೊಳ್ಳಿ.

ರಣರಣ ಬಿಸಿಲು. ಛಿದ್ರಗೊಂಡು ಬಿದ್ದಿರುವ ಟ್ಯಾಂಕರ್ (ನಮ್ಮ ಮನೆಗಳಿಗೆ ನೀರು ತಂದು ಹಾಕುವ ಟ್ಯಾಂಕರ್ ಅಲ್ಲ, ಯುದ್ಧಭೂಮಿಯಲ್ಲಿ ಬೆಂಕಿಯುಗುಳುವ ಟ್ಯಾಂಕರ್!), ಅದರ ಸೊಂಡಿಲು ಮುರಿದು ಬಿದ್ದಿದೆ, ಅದರ ಒಡಲಲ್ಲಿ ಸೈನಿಕ ಅಡಗಿ

